# ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳ ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ

**(14ನೇ ಅಕ್ಟೋಬರ್, 2014ರವರೆಗೆ ತಿದ್ದುಪಡಿಯಾದಂತೆ)**

## ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳ ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆಗೆ ಸಂಬಂಧಿಸಿದ ಸ್ಕೀಮು

1.0 ವ್ಯಾಪ್ತಿ ಮತ್ತು ಉದ್ದೇಶ

1.1 ಈ ಸ್ಕೀಮು, ಈ ಮುಂದಿನ ಅಂಶಗಳಿಗೆ ಅನುಕೂಲ ಕಲ್ಪಿಸುವುದಕ್ಕಾಗಿ, ಜವಳಿ ಸಮಿತಿಯು ಭಾರತದಲ್ಲಿನ ಆಧುನೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳ ಮೌಲ್ಯ ನಿರ್ಧರಣೆ ಮಾಡುವುದಕ್ಕೆ ಹಾಗೂ ಶ್ರೇಣಿ ನೀಡುವುದಕ್ಕೆ ಸಂಬಂಧಿಸಿದ ಅಗತ್ಯತೆಗಳನ್ನು ನಿರ್ದಿಷ್ಟಪಡಿಸುತ್ತದೆ.

ಎ) ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು, ತಮ್ಮ ಪ್ರಸಕ್ತ ಸ್ಥಿತಿಯನ್ನು ಅರಿತುಕೊಳ್ಳುವುದು ಮತ್ತು ಸುಧಾರಣೆಗೆ ಇರುವ ಅವಕಾಶವನ್ನು ಗುರುತಿಸಿಕೊಳ್ಳುವುದು.

ಬಿ) ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು, ತಮ್ಮ ಕಾರ್ಖಾನೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುವುದು ಮತ್ತು ಶ್ರೇಣಿಯನ್ನು ಪರಿಣಾಮಕಾರಿಯಾದ ಮಾರಾಟ ಸಾಧನವನ್ನಾಗಿ ಬಳಸಿಕೊಳ್ಳುವುದು.

ಸಿ) ಹತ್ತಿ ವ್ಯಾಪಾರಿಗಳು, ತಮ್ಮ ಗುಣಮಟ್ಟದ ಅಗತ್ಯತೆಗಳಿಗೆ ಹೊಂದುವಂತೆ ತಮ್ಮ ಹತ್ತಿಯನ್ನು ಸಂಸ್ಕರಣೆ ಮಾಡಿಸುವುದಕ್ಕಾಗಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

ಡಿ) ನೂಲಿನ ಗಿರಣಿಗಳು, ತಮ್ಮ ಅಗತ್ಯತೆಗಳಿಗೆ ಅರಳೆಯನ್ನು ಪಡೆಯುವುದಕ್ಕಾಗಿ ಸೂಕ್ತವಾದ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

ಇ) ಶುದ್ಧ ಅರಳೆಗೆ ಪ್ರಖ್ಯಾತ ಹೆಸರನ್ನು (ಬ್ರಾಂಡ್) ಸೃಷ್ಟಿಸುವುದು.

1.2 ಈ ಸ್ಕೀಮಿನ ಅಡಿಯಲ್ಲಿ, ಮೌಲ್ಯ ನಿರ್ಧರಣೆ ಮಾಡುವುದು ಮತ್ತು ಶ್ರೇಣಿ ನೀಡುವುದು ಕಾರ್ಖಾನೆಯ ಸ್ವಇಚ್ಛಾನುಸಾರಿಯಾದ ಕೋರಿಕೆಗೆ ಒಳಪಟ್ಟಿರುತ್ತದೆ.

2.0 ಪರಿಭಾಷೆಗಳು

2.1 ಮೌಲ್ಯನಿರ್ಧರಣೆ

ಈ ಸ್ಕೀಮಿನಲ್ಲಿ ನೀಡಿರುವ ಮಾನದಂಡಗಳ ಆಧಾರದ ಮೇಲೆ, ಆಧುನೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳ ಮೂಲ ಸೌಕರ್ಯಗಳು ಹಾಗೂ ನಿರ್ವಹಣಾ ಪದ್ಧತಿಗಳ ಮೌಲ್ಯಮಾಪನ ಮಾಡುವುದು.

2.2 ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆ

ಹತ್ತಿಯನ್ನು (ಕಾಪಸ್) ಅರಳೆಯನ್ನಾಗಿ (ಲಿಂಟು) ಪರಿವರ್ತಿಸುವ ಮತ್ತು ಆ ಅರಳೆಯನ್ನು (ಲಿಂಟು) ಬೇಲುಗಳ ರೂಪದಲ್ಲಿ ಒತ್ತುವ ಕಾರ್ಯದಲ್ಲಿ ನಿರತವಾಗಿರುವಂಥ ಕಾನೂನುಬದ್ಧ ಗುರುತುಳ್ಳ ಒಂದು ಕಾರ್ಖಾನೆ.

ಟಿಪ್ಪಣಿ:ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯು, ಅದೇ ಆವರಣದಲ್ಲಿ ಹತ್ತಿ ಬೀಜದಿಂದ ಎಣ್ಣೆ ತೆಗೆಯುವ ಸೌಕರ್ಯವನ್ನು ಹೊಂದಿದ್ದ ಪಕ್ಷದಲ್ಲಿ, ಮೌಲ್ಯ ನಿರ್ಧರಣೆಯ ವ್ಯಾಪ್ತಿಯು, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಚಟುವಟಿಕೆಗಳಿಗೆ ಮಾತ್ರ ಪರಿಮಿತವಾಗಿರುತ್ತದೆ.

2.3 ಆಧುನೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆ

ಒಂದು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯು ಅನುಬಂಧ**–I** (ANNEXURE-I) ದಲ್ಲಿ ಪಟ್ಟಿ ಮಾಡಲಾಗಿರುವ ನಿರ್ದಿಷ್ಟ ಪಡಿಸಿರುವ ಕನಿಷ್ಠ ಮಾನದಂಡಗಳನ್ನು ಈಡೇರಿಸಬೇಕಿರುತ್ತದೆ.

2.4 ಮೂಲಸೌಕರ್ಯದ ಮಾನದಂಡಗಳು

ಯಂತ್ರೋಪಕರಣ, ನಾಗರಿಕ ಮತ್ತು ಇತರ ಮೂಲ ಸೌಕರ್ಯಗಳಿಂದ ಕೂಡಿದ, ಆಧುನೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯ ಮೂಲ ಸೌಕರ್ಯ ಘಟಕಾಂಶಗಳನ್ನು ಈ ಸ್ಕೀಮಿನ ಮೌಲ್ಯ ನಿರ್ಧರಣೆಗೆ ಪರಿಗಣಿಸಲಾಗಿದೆ.

2.5 ನಿರ್ವಹಣಾ ಮಾನದಂಡಗಳು

ಈ ಸ್ಕೀಮಿನಲ್ಲಿ, ಹಿಂಜಿದ (ಜಿನ್ನಡ್) ಅರಳೆಯಲ್ಲಿರುವ ಕಲ್ಮಶವೂ ಸೇರಿದಂತೆ ಮೌಲ್ಯ ನಿರ್ಧರಣೆ ಮಾಡುವುದಕ್ಕಾಗಿ, ಆಧುನೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯ ನಿರ್ವಹಣಾ ವ್ಯವಸ್ಥೆಗಳು ಹಾಗೂ ಕಾರ್ಯ ನಿರ್ವಹಣಾ ಪದ್ಧತಿಗಳನ್ನು ಪರಿಗಣಿಸಲಾಗಿದೆ.

2.6 ಶ್ರೇಣಿ ನೀಡಿಕೆ

2.6.1 ಶ್ರೇಣಿನೀಡಿಕೆ ಎನ್ನುವುದು, ಈ ಸ್ಕೀಮಿನಲ್ಲಿ ನೀಡಲಾಗಿರುವ ಮೂಲಸೌಕರ್ಯ ಮಾನದಂಡಗಳು, ನಿರ್ವಹಣಾ ಮಾನದಂಡಗಳು ಹಾಗೂ ಶ್ರೇಣಿನೀಡಿಕೆ ಮಾನದಂಡವನ್ನು ಆಧರಿಸಿ ಮೌಲ್ಯ ನಿರ್ಧರಣೆ ಮಾಡುವ ಮೂಲಕ, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳನ್ನು ವಿವಿಧ ವರ್ಗಗಳಾಗಿ ವಿಂಗಡಿಸುವ ಪ್ರಕ್ರಿಯೆಯಾಗಿದೆ.

2.6.2 ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ಶ್ರೇಣಿ ನೀಡುವುದು ಎನ್ನುವುದು, ಒಂದು ಕಾರ್ಖಾನೆಯು ಹಿಂಜಿದ ಗುಣಮಟ್ಟದ ಅರಳೆಯ ಉತ್ಪಾದನೆಯ ವಿಷಯದಲ್ಲಿ ಅದು ಹೊಂದಿರುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಹೀಗಾಗಿ ಇದನ್ನು, ಉತ್ಪನ್ನಕ್ಕೆ ನೀಡುವ ಪ್ರಮಾಣೀಕರಣ ಎಂದು ಅರ್ಥೈಸತಕ್ಕದ್ದಲ್ಲ.

2.7 ಸಮ್ಮಿಶ್ರ (ಹೈಬ್ರಿಡ್) ಕಾರ್ಖಾನೆ

ಸಮ್ಮಿಶ್ರ (ಹೈಬ್ರಿಡ್) ಕಾರ್ಖಾನೆ ಎನ್ನುವುದು, ಒಂದೇ ಆವರಣದಲ್ಲಿ ಆಧುನೀಕೃತ ಜಿನ್ನಿಂಗ್ ಸೌಕರ್ಯ ಮತ್ತು ಸಾಂಪ್ರದಾಯಿಕ/ ಆಧುನೀಕೃತವಲ್ಲದ ಸೌಕರ್ಯವನ್ನು ಹೊಂದಿರುವ ಹಾಗೂ ಯಾವುದೇ ಸಾಮಾನ್ಯ ತಯಾರಿಕಾ ಸೌಕರ್ಯಗಳನ್ನು ಪರಸ್ಪರ ಹಂಚಿಕೊಳ್ಳುವ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯಾಗಿದೆ.

3.0 ಆಡಳಿತಾತ್ಮಕ ವ್ಯವಸ್ಥೆ

3.1 ಮೌಲ್ಯ ನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗ (ಮೌಶ್ರೇ–**ARC**)

ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳ ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆಗೆ ಸಂಬಂಧಪಟ್ಟ ಅರ್ಜಿಗಳ ಮತ್ತು ದಸ್ತಾವೇಜುಗಳ ಕಾರ್ಯಪ್ರಕ್ರಿಯೆಯನ್ನು ನಿರ್ವಹಿಸುವುದಕ್ಕಾಗಿ

ಜವಳಿ ಸಮಿತಿಯು ಒಂದು ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಿದೆ. ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗದ ಪ್ರಮುಖ ಪ್ರಕಾರ್ಯಗಳಲ್ಲಿ–ಆಸಕ್ತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳಿಂದ ಅರ್ಜಿಗಳನ್ನು ಸ್ವೀಕರಿಸುವುದು, ಮೌಲ್ಯನಿರ್ಧರಣೆಗಾಗಿ ಕಾರ್ಖಾನೆಗಳಿಗೆ ಭೇಟಿ ನೀಡುವುದಕ್ಕೆ ಸಂಬಂಧಿಸಿದಂತೆ ಇಬ್ಬರು ಸದಸ್ಯರನ್ನು ನಿಯೋಜಿಸುವುದಕ್ಕಾಗಿ ಏರ್ಪಾಟು ಮಾಡುವುದು ಹಾಗೂ ಈ ತಂಡಗಳು ನೀಡಿದ ಮೌಲ್ಯನಿರ್ಧರಣಾ ವರದಿಗಳನ್ನು ತಾಂತ್ರಿಕ ಶ್ರೇಣಿನೀಡಿಕೆ ಸಮಿತಿ ಪರಗಣಿಸುವುದಕ್ಕೆ/ ಅನುಮೋದಿಸುವುದಕ್ಕೆ ಸಂಬಂಧಿಸಿದಂತೆ ಆ ಸಮಿತಿಗೆ ಸಲ್ಲಿಸುವುದಕ್ಕಾಗಿ ಕ್ರೋಢೀಕರಿಸುವುದು ಸೇರಿವೆ.

3.2 ತಾಂತ್ರಿಕ ಶ್ರೇಣಿನೀಡಿಕೆ ಸಮಿತಿ (ತಾಂಶ್ರೇನೀಸವಿ–**TRAC**)

ಈ ಸಮಿತಿಗೆ ಅಗತ್ಯವಿರುವ ಸಂದರ್ಭಗಳಲ್ಲಿ, ಸ್ಕೀಮಿನಲ್ಲಿ ಸೂಕ್ತ ತಿದ್ದುಪಡಿಗಳನ್ನು ತರುವುದಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವ/ ಶಿಫಾರಸು ಮಾಡುವ ಕಾರ್ಯದ ಜೊತೆಗೆ, ಮೌಲ್ಯನಿರ್ಧರಣೆ ಮಾಡಲಾದ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳಿಗೆ ಔಪಚಾರಿಕವಾಗಿ ಶ್ರೇಣಿಗಳನ್ನು ನೀಡುವ ಕಾರ್ಯವನ್ನು ವಹಿಸಲಾಗಿದೆ.ಮೌಲ್ಯನಿರ್ಧರಣೆ ಮತ್ತು ಶ್ರೇಣಿ ನೀಡಿಕೆ ವಿಭಾಗವು ಕಳುಹಿಸಿಕೊಡುವ ದಸ್ತಾವೇಜುಗಳಾದಂಥ, ಭೇಟಿ ನೀಡಿದ ತಂಡ ಕೊಟ್ಟಿರುವ ವರದಿ ಮತ್ತು ಅದನ್ನು ಕುರಿತು ಮೌಲ್ಯನಿರ್ಧರಣೆ ಹಾಗೂ ಶ್ರೇಣಿನೀಡಿಕೆ ವಿಭಾಗ ಮಾಡಿರುವ ಕ್ರೋಢೀಕರಣವನ್ನು ತಾಂತ್ರಿಕ ಶ್ರೇಣಿ ನೀಡಿಕೆ ಸಮಿತಿಯು, ಸೂಕ್ತ ಶ್ರೇಣಿ ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲಿಸುತ್ತದೆ.ತಾಂತ್ರಿಕ ಶ್ರೇಣಿ ನೀಡಿಕೆ ಸಮಿತಿಗೆ ಕಾರ್ಯದರ್ಶಿ, ಜವಳಿ ಸಮಿತಿ, ಮುಂಬೈ ಇವರು ಅಧ್ಯಕ್ಷರಾಗಿರುತ್ತಾರೆ ಮತ್ತು ಈ ಮುಂದಿನವರು ಸದಸ್ಯರಾಗಿರುತ್ತಾರೆ:

**(i)** ಜಂಟಿ ಜವಳಿ ಆಯುಕ್ತರು ಅಥವಾ ಉಪ ನಿರ್ದೇಶಕರ ಶ್ರೇಣಿಗಿಂತ ಕೆಳಗಿನದಲ್ಲದ ಶ್ರೇಣಿಯ ಅವರ ಪ್ರತಿನಿಧಿ.

**(ii)** ಭಾರತದ ಹತ್ತಿ ನಿಗಮ (ಭಾಹನಿ)ದ ಪ್ರತಿನಿಧಿ.

**(iii)** ನಿರ್ದೇಶಕರು (ಇಪಿ ಮತ್ತು ಕ್ಯೂಎ) ಅಥವಾ ಜವಳಿ ಸಮಿತಿಯ ಉಪನಿರ್ದೇಶಕರ ಶ್ರೇಣಿಗಿಂತ ಕೆಳಗಿನದಲ್ಲದ ಶ್ರೇಣಿಯ ಅವರ ಪ್ರತಿನಿಧಿ.

**(iv)** ಅಗತ್ಯವಿದ್ದ ಪಕ್ಷದಲ್ಲಿ, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ಆಹ್ವಾನಿತರಾಗಿ ಭೇಟಿ ನೀಡಿದ್ದ ಅಧಿಕಾರಿ/ಗಳು.

ತಾಂತ್ರಿಕ ಶ್ರೇಣಿ ನೀಡಿಕೆ ಸಮಿತಿಯು, ಸಭೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದಂತೆ, ತಮ್ಮ ಆಯ್ಕೆಗನುಸಾರವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವ್ಯಕ್ತಿಗಳನ್ನು ಆಹ್ವಾನಿಸುವ ಅಧಿಕಾರ ಹೊಂದಿದೆ. ತಾಂತ್ರಿಕ ಶ್ರೇಣಿನೀಡಿಕೆ ಸಮಿತಿಯು, ಶ್ರೇಣಿನೀಡಿಕೆ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಯಾವಾಗ ಸಭೆ ಸೇರಬೇಕಿರುತ್ತದೋ ಆಗಾಗ ಸಭೆ ಸೇರತಕ್ಕದ್ದು.

3.3 ತಜ್ಞರ ತಂಡ

ಜವಳಿ ಸಮಿತಿಯು, ಯುಕ್ತ ಅರ್ಹತೆ, ಜ್ಞಾನ, ಅನುಭವ, ತರಬೇತಿ ಮೊದಲಾದವುಗಳನ್ನು ಹೊಂದಿರುವುದರ ಆಧಾರದ ಮೇಲೆ ಒಂದು ತಜ್ಞರ ತಂಡವನ್ನು ರಚಿಸಿದೆ.ಈ ತಜ್ಞರ ತಂಡದ ಸದಸ್ಯರು, ಸ್ಥಳದಲ್ಲಿಯೇ ಮೌಲ್ಯನಿರ್ಧರಣೆ ಮಾಡುವುದಕ್ಕಾಗಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳಿಗೆ ಭೇಟಿ ನೀಡುವರು.

4.0 ಮೌಲ್ಯ ನಿರ್ಧರಣೆಗೆ ಅರ್ಹತೆ

4.1 ಟಿಎಂಸಿ **(TMC)** ಅಥವಾ ಟಿಯುಎಫ್ಎಸ್ **(TUFS)** ಅಡಿಯಲ್ಲಿ ಅಥವಾ ಕಾರ್ಖಾನೆ ತನ್ನ ಸ್ವಂತ ನಿಧಿಯ ಮೂಲಕ ಆಧುನೀಕರಿಸಿರುವ ಮತ್ತು ಅನುಬಂಧ**–I**(ANNEXURE-I) ದಲ್ಲಿಯ ಪಟ್ಟಿ ಮಾಡಿರುವ ಕನಿಷ್ಠ ಅರ್ಹತೆಯ ಮಾಪನಗಳನ್ನು ಪೂರೈಸಿರುವ, ಯಾವುದೇ ಜಿನ್ನಿಂಗ್ ಹಾಗೂ ಪ್ರೆಸ್ಸಿಂಗ್ ಕಾರ್ಖಾನೆಯು ಜವಳಿ ಸಮಿತಿಯು ಮಾಡುವ ಮೌಲ್ಯ ನಿರ್ಧರಣೆಗೆ ಅರ್ಹವಾಗಿರುತ್ತದೆ.

4.2 ಒಂದೇ ಆವರಣದಲ್ಲಿ ಸಮ್ಮಿಶ್ರ ಸೌಕರ್ಯಗಳನ್ನು (ಸಾಂಪ್ರದಾಯಿಕ ಮತ್ತು ಆಧುನಿಕ ಸೌಕರ್ಯಗಳು) ಹೊಂದಿರುವಂಥ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು ಮೌಲ್ಯ ನಿರ್ಧರಣೆಗೆ ಅರ್ಹವಾಗಿರುವುದಿಲ್ಲ.

5.0 ನೋಂದಣಿ ಮತ್ತು ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವಿಕೆ.

ಮೌಲ್ಯ ನಿರ್ಧರಣೆ ಮತ್ತು ಶ್ರೇಣಿ ನೀಡಿಕೆಯ ವಿಷಯದಲ್ಲಿ ಆಸಕ್ತಿ ಹೊಂದಿರುವಂಥ ಹಾಗೂ ಅನುಬಂಧ**–I** (ANNEXURE-I) ದಲ್ಲಿಯ ಅರ್ಹತಾ ಅಗತ್ಯತೆಗಳನ್ನು ಪೂರೈಸಿರುವಂಥ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯು, ನೋಂದಣಿಗಾಗಿ ನಿರ್ದಿಷ್ಟಪಡಿಸಿದ ನಮೂನೆ – ಅನುಬಂಧ**–II** (ANNEXURE-II) ದಲ್ಲಿ ಜವಳಿ ಸಮಿತಿಗೆ ಅರ್ಜಿ ಸಲ್ಲಿಸತಕ್ಕದ್ದು. ಹೀಗೆ

ಅರ್ಜಿ ಸಲ್ಲಿಸುವಾಗ ಅರ್ಜಿಯೊಂದಿಗೆ 5000/– ರೂಗಳ ನೋಂದಣಿ ಶುಲ್ಕ ಮತ್ತು ಅನ್ವಯವಾಗುವ ಶ್ರೇಣಿ ನೀಡಿಕೆ ಶುಲ್ಕವನ್ನು ಪಾವತಿಸತಕ್ಕದ್ದು.ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯು ಅರ್ಜಿಯಲ್ಲಿ ಒದಗಿಸಿದ ಮಾಹಿತಿಯನ್ನು ಆಧರಿಸಿ ಇತರ ಅಂಶಗಳ ಜೊತೆಯಲ್ಲಿ ಕನಿಷ್ಠ ಅರ್ಹತಾ ಅಗತ್ಯತೆಗಳನ್ನು ಪೂರೈಸಿರುವುದನ್ನು ಕುರಿತು ಖಚಿತಪಡಿಸಿಕೊಳ್ಳುವುದಕ್ಕಾಗಿ,ಸದರಿ ಅರ್ಜಿಯನ್ನು ಪರಿಶೀಲಿಸತಕ್ಕದ್ದು.ಮೇಲ್ನೋಟಕ್ಕೆ ಕಾರ್ಖಾನೆಯು ಮೌಲ್ಯನಿರ್ಧರಣೆಗೆ ಅರ್ಹವೆಂದು ಕಂಡುಬಂದ ಪಕ್ಷದಲ್ಲಿ ಆ ಅರ್ಜಿಯನ್ನು ಮೌಲ್ಯ ನಿರ್ಧರಣೆಗಾಗಿ ನೋಂದಾಯಿಸಿಕೊಳ್ಳತಕ್ಕದ್ದು.

## 6.0 ಶ್ರೇಣಿ ನೀಡಿಕೆ ಶುಲ್ಕ

ಮೂರು ವರ್ಷಗಳ ಅವಧಿಗೆ ಸಂಬಂಧಿಸಿದ ಶ್ರೇಣಿ ನೀಡಿಕೆ ಶುಲ್ಕವು ರೂ.35,000/– ಮತ್ತು ಅನ್ವಯಿಸುವ ತೆರಿಗೆಗಳು ಆಗಿರುತ್ತದೆ.ಈ ಶ್ರೇಣಿ ನೀಡಿಕೆ ಶುಲ್ಕದಲ್ಲಿ, ಮೂರು ವರ್ಷಗಳ ಅವಧಿಯೊಳಗೆ ಕೈಗೊಳ್ಳಲಾಗುವ ಒಂದು ಮಧ್ಯಕಾಲಿಕ ನಿಗಾವಣಾ ಭೇಟಿಯೂ ಸೇರಿರುತ್ತದೆ.

## 7.0 ಮೌಲ್ಯ ನಿರ್ಧರಣಾ ಕಾರ್ಯವಿಧಾನ

### 7.1 ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ಮೌಲ್ಯನಿರ್ಧರಣಾ ತಂಡ ಭೇಟಿ ನೀಡುವುದು

ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಮೌಲ್ಯನಿರ್ಧರಣೆ ಮಾಡಬೇಕಾಗಿರುವ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ಭೇಟಿ ನೀಡುವುದಕ್ಕೆ ಸಂಬಂಧಿಸಿದಂತೆ, ತಜ್ಞರ ತಂಡದಿಂದ ಆಯ್ಕೆ ಮಾಡಲಾದ ಇಬ್ಬರು ಸದಸ್ಯರಿರುವ ತಂಡವನ್ನು ನಿಯೋಜಿಸುವುದಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು.ಈ ತಂಡವು, ಮೌಲ್ಯನಿರ್ಧರಣೆ ಮಾಡುವ ಸಮಯದಲ್ಲಿ ಸಂಬಂಧಪಟ್ಟ ಘಟಕವು ಕಾರ್ಯನಿರತವಾಗಿರುವುದನ್ನು ಮತ್ತು ಮೌಲ್ಯ ನಿರ್ಧರಣೆಗಾಗಿ ಪರಿಗಣಿಸಲಾಗಿರುವ ಮಾನದಂಡಗಳು ಬಳಕೆಯಲ್ಲಿರುವುದನ್ನು ಅಥವಾ ಆಚರಣೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.ಹಾಗೆಯೇ ತಂಡವು, ಯಂತ್ರೋಪಕರಣ ಮತ್ತು ಸಿವಿಲ್ ಬಾಬುಗಳೂ ಸೇರಿದಂತೆ, ಮೂಲ ಸೌಕರ್ಯಕ್ಕೆ ಸಂಬಂಧಿಸಿದ ಪ್ರತಿ ಬಾಬುವನ್ನೂ ಪರಿವೀಕ್ಷಣೆ ಮಾಡತಕ್ಕದ್ದು; ಭೇಟಿ ನೀಡಿರುವ ಸಮಯದಲ್ಲಿ, ಘಟಕದಲ್ಲಿರುವ ಕೆಲಸದ ಪರಿಸ್ಥಿತಿಗಳೂ ಸೇರಿದಂತೆ ಅದು ಅಳವಡಿಸಿಕೊಂಡಿರುವ ನಿರ್ವಹಣಾ ಪದ್ಧತಿಗಳನ್ನು ಪರಿಶೀಲಿಸತಕ್ಕದ್ದು; ಮತ್ತು ಕಲ್ಮಶವನ್ನು ತೆಗೆಯುವುದಕ್ಕಾಗಿ ಸಂಸ್ಕರಣೆ ಮಾಡಿರುವ ಅರಳೆಯ ಮಾದರಿಯನ್ನು ಕಣ್ಣಾರೆ ವಿವರವಾಗಿ

ಪರೀಕ್ಷಿಸತಕ್ಕದ್ದು. ಮೌಲ್ಯನಿರ್ಧರಣೆ ಮಾಡಬೇಕಾಗಿರುವ ಮೂಲಸೌಕರ್ಯ ಮತ್ತು ನಿರ್ವಹಣೆಗೆ ಸಂಬಂಧಿಸಿದ ಮಾನದಂಡಗಳನ್ನು ಮೌಲ್ಯನಿರ್ಧರಣೆ ನಮೂನೆ ಅನುಬಂಧ–**III** (ANNEXURE-III) ದಲ್ಲಿ ನೀಡಲಾಗಿದೆ. ಭೇಟಿ ನೀಡಿದ ತಂಡವು, ಕಲ್ಮಶವೂ ಸೇರಿದಂತೆ ಪ್ರತಿಯೊಂದು ಮೂಲಸೌಕರ್ಯದ ಮಾನದಂಡ ಮತ್ತು ನಿರ್ವಹಣಾ ಮಾನದಂಡಕ್ಕೆ ಸಂಬಂಧಿಸಿದಂತೆ ಅಂಕಗಳನ್ನು ನೀಡತಕ್ಕದ್ದು. ಮೂಲಸೌಕರ್ಯ ಮಾನದಂಡಗಳು ಮತ್ತು ನಿರ್ವಹಣಾ ಮಾನದಂಡಗಳಿಗೆ ಸಂಬಂಧಿಸಿದ ಅಂಕ ನೀಡಿಕೆಯ ಸ್ಕೀಮನ್ನು ಅನುಬಂಧ–**IV**(ANNEXURE-IV) ದಲ್ಲಿಯ ಕೋಷ್ಟಕ **I** ಮತ್ತು **II**ರಲ್ಲಿ ನೀಡಲಾಗಿದೆ.ಅಲ್ಲದೆ ಈ ತಂಡವು, ಮೌಲ್ಯ ನಿರ್ಧರಣಾ ವರದಿಯನ್ನು ಅನುಬಂಧ–**III** (ANNEXURE-III) ದಲ್ಲಿ ಸಿದ್ಧಪಡಿಸಿ, ಅದನ್ನು ಮೌಲ್ಯನಿರ್ಧರಣಾ ಮತ್ತು ಶ್ರೇಣಿನೀಡಿಕೆ ವಿಭಾಗಕ್ಕೆ ಸಲ್ಲಿಸತಕ್ಕದ್ದು.

7.2 ಕಲ್ಮಶಕ್ಕೆ ಸಂಬಂಧಿಸಿದಂತೆ ಕಣ್ಣಾರೆ ಪರೀಕ್ಷೆ ಮಾಡುವುದು

ಮೌಲ್ಯನಿರ್ಧರಣಾ ತಂಡವು, ಕಲ್ಮಶದ ಮೌಲ್ಯನಿರ್ಧರಣೆ ಮಾಡುವುದಕ್ಕಾಗಿ, ಯಾವುದೋ ಒಂದು ಇಷ್ಟ ಬಂದ ಬೇಲನ್ನು ಆರಿಸಿಕೊಂಡು ಬಿಚ್ಚತಕ್ಕದ್ದು. ಹಾಗೆ ಆರಿಸಿಕೊಳ್ಳಲಾದ ಬೇಲನ್ನು ಮೌಲ್ಯನಿರ್ಧರಣೆ ಮಾಡುವ ದಿನದಂದು, ಹತ್ತಿಯ (ಕಾಪಸ್) ಹಂತದಿಂದ ಬೇಲಿನ ಹಂತಕ್ಕೆ ಸಂಸ್ಕರಣೆ ಮಾಡಿರುವಂಥಹದ್ದಾಗಿರಬೇಕು. ಹಾಗೆ ಬಿಚ್ಚಲಾದ ಹಿಂಜಿರುವ (ಜಿನ್ನಿಂಗ್) ಅರಳೆಯಲ್ಲಿ ಇರಬಹುದಾದ ಕಲ್ಮಶಗಳ ಸಮಗ್ರ ಚಿತ್ರ ದೊರೆಯುವಂತೆ ಮಾಡುವ ದೃಷ್ಟಿಯಿಂದ, ಬೇಲಿನಿಂದ ಸುಮಾರು 25 ಕೆ.ಜಿ.ಯಷ್ಟು ಅರಳೆಯನ್ನು ತಂಡದ ಸಮ್ಮುಖದಲ್ಲಿ ಒಂದು ಹಾಸುಗಟ್ಟೆಯ (ಪ್ಲಾಟ್‌ಫಾರ್ಮ್)ಮೇಲೆ ಹರಡತಕ್ಕದ್ದು.ಮೌಲ್ಯನಿರ್ಧರಣಾ ತಂಡವು, ಈ ಅರಳೆಯಲ್ಲಿರುವ ಕಲ್ಮಶಗಳನ್ನು ಕಣ್ಣಾರೆ ಪರೀಕ್ಷಿಸತಕ್ಕದ್ದು ಮತ್ತು ವಿಶ್ಲೇಷಿಸತಕ್ಕದ್ದು, ಆನಂತರ ಅಂಕನೀಡಿಕೆ (ಮಾರ್ಕಿಂಗ್) ಸ್ಕೀಮಿಗೆ ಅನುಬಂಧ–**IV** (ANNEXURE-IV) ದಲ್ಲಿ ಅನುಸಾರವಾಗಿ ಅಂಕಗಳನ್ನು ನೀಡತಕ್ಕದ್ದು.

7.3 ಭಾವಚಿತ್ರಗಳು

ಮೌಲ್ಯ ನಿರ್ಧರಣಾ ತಂಡವು, ತಮ್ಮ ಲಿಖಿತ ವರದಿಗಳಿಗೆ ಪೂರಕವಾಗಬಹುದಾದಂಥ ಮತ್ತು ವರದಿಯ ಗುಣಮಟ್ಟ ಹೆಚ್ಚಿಸಬಹುದಾದಂಥ ಮೂಲಸೌಕರ್ಯ ಘಟಕಾಂಶಗಳ ಭಾವಚಿತ್ರಗಳನ್ನು ಅಗತ್ಯಾನುಸಾರ ತೆಗೆದುಕೊಳ್ಳಬಹುದು. ಹಾಗೆಯೇ ತಂಡವು, ನಿರ್ವಹಣಾ

ಮಾನದಂಡಗಳ ಘಟಕಾಂಶಗಳ ಭಾವಚಿತ್ರಗಳನ್ನು ಸಹ ಯುಕ್ತವೆಂದು ಭಾವಿಸುವುದಕ್ಕೆ ಅನುಸಾರವಾಗಿ ಹೆಚ್ಚುವರಿಯಾಗಿ ತೆಗೆದುಕೊಳ್ಳಬಹುದು. ಈ ಭಾವಚಿತ್ರಗಳನ್ನು ವರದಿಯೊಂದಿಗೆ ಲಗತ್ತಿಸಿ ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗಕ್ಕೆ ಸಲ್ಲಿಸತಕ್ಕದ್ದು.

## 8.0 ಕ್ರೋಢೀಕರಣ

ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ತಂಡದ ಮೌಲ್ಯ ನಿರ್ಧರಣಾ ವರದಿಯನ್ನು ಪರಿಶೀಲಿಸತಕ್ಕದ್ದು. ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಕೈಗಾರಿಕಾ ಮೂಲಸೌಕರ್ಯ ಮಾನದಂಡಗಳ ಸಂಬಂಧದಲ್ಲಿ ಗಳಿಸಿದ ಶೇಕಡಾವಾರು ಅಂಕವನ್ನು, ನಿರ್ವಹಣಾ ಮಾನದಂಡಗಳು, ಕನಿಷ್ಠ ಅರ್ಹತಾ ಮಾನದಂಡಗಳಿಗೆ ಸಂಬಂಧಿಸಿದ ಮಾಪನವನ್ನು ಈಡೇರಿಸುವುದು ಮತ್ತು ಅತ್ಯಾವಶ್ಯಕ ಮಾನದಂಡಗಳಿಗೆ ಸಂಬಂಧಿಸಿದ ಮಾಪನವನ್ನು ಈಡೇರಿಸುವುದರ ಸಂಬಂಧದಲ್ಲಿ ಗಳಿಸಿದ ಶೇಕಡಾವಾರು ಅಂಕವನ್ನು ಕ್ರೋಢೀಕರಿಸತಕ್ಕದ್ದು. ಕಾರ್ಖಾನೆಯು ಮೂಲಸೌಕರ್ಯ ಮಾನದಂಡಗಳ ಮತ್ತು ನಿರ್ವಹಣಾ ಮಾನದಂಡಗಳ ಎರಡೂ ವಿಷಯದಲ್ಲಿಯೂ ಶೇ. 80 ಅಥವಾ ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಪಕ್ಷದಲ್ಲಿ, ಆಗ ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು ಚತುರ್ತಾರಾ ಮತ್ತು ಪಂಚತಾರಾ ಶ್ರೇಣಿನೀಡಿಕೆ (ಫೋರ್‌ಸ್ಟಾರ್ ಮತ್ತು ಫೈವ್‌ಸ್ಟಾರ್ ರೇಟಿಂಗ್)ಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಲಾಗಿರುವ, ಹೆಚ್ಚುವರಿ ಅಗತ್ಯತೆಗಳನ್ನು ಈಡೇರಿಸುವುದಕ್ಕೆ ಸಂಬಂಧಿಸಿದ ಅನುಪಾಲನಾ ಮಟ್ಟವನ್ನು ಸಹ ಕ್ರೋಢೀಕರಿಸತಕ್ಕದ್ದು. ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಮೌಲ್ಯನಿರ್ಧರಣಾ ವರದಿಯ ಜೊತೆಗೆ, ತನ್ನ ಶಿಫಾರಸನ್ನು **(ಅನುಬಂಧ–V)** (ANNEXURE-V) ದಲ್ಲಿ ಒಳಗೊಂಡಿರುವ ಕ್ರೋಢೀಕೃತ ವರದಿಯನ್ನು ತಾಂತ್ರಿಕ ಶ್ರೇಣಿನೀಡಿಕೆ ಸಮಿತಿಗೆ ಕಳುಹಿಸತಕ್ಕದ್ದು.

## 9.0 ಶ್ರೇಣಿ ನೀಡುವುದು

9.1 ತಾಂತ್ರಿಕ ಶ್ರೇಣಿನೀಡಿಕೆ ಸಮಿತಿಯು, ಭೇಟಿ ನೀಡುವ ತಂಡದ ಮೌಲ್ಯನಿರ್ಧರಣಾ ವರದಿ, ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗದ ಕ್ರೋಢೀಕೃತ ವರದಿ ಹಾಗೂ ಶಿಫಾರಸುಗಳನ್ನು ಪರಿಶೀಲಿಸುತ್ತದೆ.ಆನಂತರ ಅನುಬಂಧ– **I**(ANNEXURE-I) ರಲ್ಲಿ ನೀಡಿದ

ಅರ್ಹತಾ ಮಾಪನಕ್ಕೆ ಅನುಸಾರವಾಗಿ, ಯುಕ್ತ ಶ್ರೇಣಿ ಅಥವಾ ಇನ್ನಿತರ ಮೌಲ್ಯಾಂಕವನ್ನು ನೀಡುತ್ತದೆ.

9.2 ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ತಾಂತ್ರಿಕ ಶ್ರೇಣಿನೀಡಿಕೆ ಸಮಿತಿ ನೀಡಿದ ಶ್ರೇಣಿಯನ್ನು ಹಾಗೂ ಮೌಲ್ಯನಿರ್ಧರಣಾ ಸ್ಥಿತಿಯ ವರದಿ (ಮೌಸ್ಥಿವ)ಯನ್ನು ಸಂಬಂಧಪಟ್ಟ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ಕಳುಹಿಸಿಕೊಡತಕ್ಕದ್ದು.

9.3.1 ಮೌಲ್ಯನಿರ್ಧರಣೆಗೆ ಒಳಪಟ್ಟ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯು, ಅನುಬಂಧ–**I** (ANNEXURE-I) ದಲ್ಲಿ ರಲ್ಲಿ ನೀಡಲಾಗಿರುವ ಅರ್ಹತಾ ಮಾಪನಕ್ಕೆ ಅನುಸಾರವಾಗಿ ಯಾವುದೇ ಶ್ರೇಣಿ ಪಡೆಯುವುದಕ್ಕೆ ಅರ್ಹವಾಗದಿದ್ದ ಪಕ್ಷದಲ್ಲಿ, ಅಂಥ ಕಾರ್ಖಾನೆಗೆ,'ತಾತ್ಕಾಲಿಕ ಶ್ರೇಣಿ ನೀಡಿಕೆ ಸ್ಥಿತಿಯನ್ನು ನೀಡತಕ್ಕದ್ದು ಮತ್ತು ಅದನ್ನು ಮೌಲ್ಯನಿರ್ಧರಣಾ ಸ್ಥಿತಿಯ ವರದಿಯಲ್ಲಿ (ಮೌಸ್ಥಿವ–**ASR**) ಲಗತ್ತಿಸತಕ್ಕದ್ದು. ಇಂಥ ಕಾರ್ಖಾನೆಯು, ಅಗತ್ಯ ಸುಧಾರಣೆಗಳನ್ನು ಮಾಡಿದ ಮೇಲೆ ಮತ್ತು ಅನ್ವಯವಾಗುವಂಥ ಶುಲ್ಕ ಪಾವತಿಸಿದ ನಂತರ ಮರುಮೌಲ್ಯನಿರ್ಧರಣೆ ಮಾಡುವಂತೆ ಕೋರಬಹುದು.

9.3.2 ಆದಾಗ್ಯೂ, ಇನ್ನಿತರ ರೂಪದಲ್ಲಿ ಒಂದು ಕಾರ್ಖಾನೆಯು ತಾರಾ ಶ್ರೇಣಿನೀಡಿಕೆ (ಸ್ಟಾರ್ ರೇಟಿಂಗ್)ಗೆ ಅರ್ಹವಾಗಿದ್ದು ಆದರೆ, ಕನಿಷ್ಠ ಅರ್ಹತಾ ಮಾಪನದ ಅಡಿಯಲ್ಲಿನ ಯಾವುದೇ ಒಂದು ಮಾನದಂಡವನ್ನು ಸಹ ಈಡೇರಿಸದಿದ್ದ ಪಕ್ಷದಲ್ಲಿ, ಅದಕ್ಕೆ ಕಾಲ ಕಾಲಕ್ಕೆ ನಿಗದಿಪಡಿಸಬಹುದಾದಂತೆ ಒಂದು ಪರಿಮಿತ ಅವಧಿಯವರೆಗೆ ಏಕತಾರಾ ಶ್ರೇಣಿ (ಸಿಂಗಲ್ ಸ್ಟಾರ್ ರೇಟಿಂಗ್)ಯನ್ನು ನೀಡಲಾಗುವುದು. ಈ ಪರಿಮಿತ ಅವಧಿಯೊಳಗೆ ಆ ಕಾರ್ಖಾನೆಯು, ಅಗತ್ಯ ಸುಧಾರಣೆಯನ್ನು ಕೈಗೊಳ್ಳುವ ಮೂಲಕ ಅಂಥ ನಿರ್ದಿಷ್ಟ ಮಾನದಂಡವನ್ನು ಈಡೇರಿಸಬೇಕಿರುತ್ತದೆ.

9.3.3 ಅಗತ್ಯತೆಯನ್ನು ಈಡೇರಿಸುವುದರ ಮೇಲೆ, ಅಂಥ ನಿರ್ದಿಷ್ಟ ಮಾನದಂಡಕ್ಕೆ ಸಂಬಂಧಿಸಿದಂತೆ ಅನುಮತಿಸಲಾಗಿರುವ ಅಂಕಗಳನ್ನು ನೀಡಲಾಗುವುದು ಮತ್ತು ಆ ಕಾರ್ಖಾನೆಗೆ ಅನ್ವಯವಾಗುವ ತಾರಾ ಶ್ರೇಣಿಯನ್ನು ನೀಡಲಾಗುವುದು.

9.3.4 ಇದಕ್ಕೆ ಬದಲಾಗಿ,ಅಂಥ ಕಾರ್ಖಾನೆಯು ನಿಗದಿತ ಅವಧಿಯೊಳಗೆ ಈಡೇರಿಸಬೇಕಾಗಿರುವ ಅಗತ್ಯತೆಯನ್ನು ಈಡೇರಿಸುವುದರಲ್ಲಿ ವಿಫಲವಾದ ಪಕ್ಷದಲ್ಲಿ, ಆ ಕಾರ್ಖಾನೆಗೆ ನೀಡಲಾಗಿದ್ದ ಏಕತಾರಾ ಶ್ರೇಣಿಯನ್ನು ಹಿಂಪಡೆದುಕೊಳ್ಳತಕ್ಕದ್ದು.

9.4 ಕಾರ್ಖಾನೆಗಳ ಆವರಣಗಳ ಮೇಲೆ ಯಾವುದೇ ಕಡಿಮೆ ಪ್ರಸರಣ ಶಕ್ತಿಯ(ಎಲ್‌ಟಿ)/ ಅಧಿಕ ಪ್ರಸರಣ ಶಕ್ತಿಯ (ಎಚ್‌ಟಿ)ವಿದ್ಯುತ್ ತಂತಿಮಾರ್ಗ ಹಾದು ಹೋಗಿರುವ ಪಕ್ಷದಲ್ಲಿ, ಅಂಥ ಕಾರ್ಖಾನೆಗೆ ಎಲ್‌ಟಿ/ ಎಚ್‌ಟಿ ವಿದ್ಯುತ್ ತಂತಿಮಾರ್ಗಕ್ಕೆ ಸಂಬಂಧಪಟ್ಟ 'ಸಲಹಾತ್ಮಕ ಟಿಪ್ಪಣಿ' ಸಹಿತ ಅನ್ವಯವಾಗುವ ತಾರಾ ಶ್ರೇಣಿಯನ್ನು ನೀಡಲಾಗುವುದು.

10.0 ಶ್ರೇಣಿ ಪ್ರಮಾಣಪತ್ರ/ ತಾತ್ಕಾಲಿಕ ಶ್ರೇಣಿ ಸ್ಥಿತಿಯ ಪತ್ರ

ಒಂದು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ, ಯಾವುದು ಅನ್ವಯವಾಗುವುದೊ ಅದರಂತೆ ಶ್ರೇಣಿ ಪ್ರಮಾಣಪತ್ರವನ್ನು ಅಥವಾ ತಾತ್ಕಾಲಿಕ ಶ್ರೇಣಿ ಸ್ಥಿತಿಯ ಪತ್ರವನ್ನು ನೀಡತಕ್ಕದ್ದು.ಇವು,ನೀಡಲಾದ ಶ್ರೇಣಿ ಅಥವಾ ತಾತ್ಕಾಲಿಕ ಶ್ರೇಣಿಯ ಸ್ಥಿತಿ, ನೀಡಿದ ದಿನಾಂಕ ಮತ್ತು ಸಿಂಧುತ್ವ ಹೊಂದಿರುವ ಅವಧಿಯ ವಿವರಗಳನ್ನು ಒಳಗೊಂಡಿರತಕ್ಕದ್ದು.ಹೀಗೆ ನೀಡಲಾದ ಶ್ರೇಣಿ ಅಥವಾ ತಾತ್ಕಾಲಿಕ ಶ್ರೇಣಿ ಸ್ಥಿತಿ ಕುರಿತ ಮಾಹಿತಿಯನ್ನು ನೂಲಿನ ಗಿರಣಿಗಳು, ಹತ್ತಿ ವ್ಯಾಪಾರಿಗಳು/ ಮಾರಾಟಗಾರರು, ಜಿನ್ನಿಂಗ್ ಕಾರ್ಖಾನೆಗಳು ಮುಂತಾದ ಎಲ್ಲ ಆಸಕ್ತರ ಮಾಹಿತಿಗಾಗಿ ಜವಳಿ ಸಮಿತಿಯ ಜಾಲತಾಣ (WEBSITE) ದಲ್ಲಿ ಸಹ ಪ್ರಕಟಿಸಲಾಗುವುದು.

11.0 ಶ್ರೇಣಿಯ ಬಳಕೆ

ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗೆ ನೀಡಿದ ತಾರಾ ಶ್ರೇಣಿಯನ್ನು, ಆ ಕಾರ್ಖಾನೆಯ ಮಾನ್ಯತೆಯ ದ್ಯೋತಕವಾಗಿ ಮತ್ತು ಗುಣಮಟ್ಟದ ಹಿಂಜಿದ ಅರಳೆಯನ್ನು ಉತ್ಪಾದಿಸುವ ಅದರ ಸಾಮರ್ಥ್ಯಕ್ಕೆ ಸಂಬಂಧಿಸಿದ ಮಾರಾಟ ಸಾಧನವನ್ನಾಗಿ ಬಳಸಲು ಉದ್ದೇಶಿಲಾಗಿದೆಯೇ ಹೊರತು, ಬೇಲಿನ ಮೇಲೆ ಉತ್ಪನ್ನಕ್ಕೆ ನೀಡಿರುವ ಪ್ರಮಾಣೀಕರಣದಂತೆ ಬಳಸಲು ನೀಡಿರುವುದಿಲ್ಲ.

12.0 ಶ್ರೇಣಿಯ ಸಿಂಧುತ್ವ ಮತ್ತು ನಿಗಾವಣಾ ಭೇಟಿ

12.1.1 ಒಮ್ಮೆ ನೀಡಲಾದ ತಾರಾ ಶ್ರೇಣಿಯು 3 ವರ್ಷಗಳವರೆಗೆ ಸಿಂಧುವಾಗಿರುತ್ತದೆ. ಆದರೂ ಜವಳಿ ಸಮಿತಿಯು, ಇಂಥ ಪ್ರಮಾಣೀಕೃತ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಯಲ್ಲಿರುವ ಯಂತ್ರೋಪಕರಣ, ಸಿವಿಲ್ ಮೂಲಸೌಕರ್ಯ ಮೊದಲಾದಂಥ ಸೌಲಭ್ಯಗಳು ಸುಸ್ಥಿತಿಯಲ್ಲಿವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ಈ ಮೂರು ವರ್ಷಗಳ ಸಿಂಧುತ್ವದ ಅವಧಿಯೊಳಗೆ, ಒಂದು ಮಧ್ಯಕಾಲಿಕ ನಿಗಾವಣಾ ಭೇಟಿಯನ್ನು ವ್ಯವಸ್ಥೆ ಮಾಡತಕ್ಕದ್ದು.ಅಲ್ಲದೆ, ಅಗತ್ಯವೆನಿಸಿದ ಪಕ್ಷದಲ್ಲಿ ಇಂಥ ಹೆಚ್ಚುವರಿ ಭೇಟಿಗಳನ್ನು ಸಹ ವ್ಯವಸ್ಥೆ ಮಾಡಬಹುದು.

12.1.2 ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು (ಮೌಶ್ರೇವಿ), ಮಧ್ಯಕಾಲಿಕ ನಿಗಾವಣಾ ಭೇಟಿಗೆ ಸಂಬಂಧಿಸಿದಂತೆ ತಜ್ಞರ ತಂಡದ ಅಧಿಕಾರಿ/ಗಳನ್ನು ನಿಯೋಜಿಸಲು ವ್ಯವಸ್ಥೆ ಮಾಡತಕ್ಕದ್ದು.

12.1.3 ಇಂಥ ಅಧಿಕಾರಿ/ಗಳು ಯಂತ್ರೋಪಕರಣ, ಸಿವಿಲ್ ಮೂಲಸೌಕರ್ಯ ಮೊದಲಾದ ಸೌಲಭ್ಯಗಳು ಸುಸ್ಥಿತಿಯಲ್ಲಿವೆಯೇ ಎನ್ನುವುದನ್ನು ಕುರಿತು ಪರಿಶೀಲಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ನಿಗಾವಣಾ ಭೇಟಿಯ ವರದಿಯನ್ನು ಅನುಬಂಧ– **VI** (ANNEXURE-VI) ದಲ್ಲಿ ಸಲ್ಲಿಸತಕ್ಕದ್ದು.

12.2.1 ತಾತ್ಕಾಲಿಕ ಶ್ರೇಣಿ ಸ್ಥಿತಿಯನ್ನು, ಕಾರ್ಖಾನೆಗಳಿಗೆ ಒಂದು ವರ್ಷದ ಅವಧಿಯವರೆಗೆ ನೀಡತಕ್ಕದ್ದು. ಇಂಥ ಕಾರ್ಖಾನೆಗಳು ಈ ಒಂದು ವರ್ಷದೊಳಗೆ, ಮೌಲ್ಯನಿರ್ಧರಣಾ ಸ್ಥಿತಿಯ ವರದಿಯಲ್ಲಿ ಸೂಚಿಸಲಾದ ಮಾನದಂಡಗಳಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳುವ ಮೂಲಕ ಶ್ರೇಣಿ ನೀಡಿಕೆಗೆ ಸಂಬಂಧಿಸಿದಂತೆ ಮರುಮೌಲ್ಯನಿರ್ಧರಣೆಗೆ ಕೋರುವುದನ್ನು ನಿರೀಕ್ಷಿಸಲಾಗಿದೆ.ಆದಾಗ್ಯೂ, ತಾತ್ಕಾಲಿಕ ಶ್ರೇಣಿ ಸ್ಥಿತಿಯನ್ನು, ಅದರ ಗುಣಾರ್ಹತೆಯನ್ನು ಅವಲಂಬಿಸಿ, ಆಯಾ ಪ್ರಕರಣದ ಆಧಾರದ ಮೇಲೆ ವಿಸ್ತರಿಸಬಹುದು.

12.2.2 'ತಾತ್ಕಾಲಿಕ ಶ್ರೇಣಿ ಸ್ಥಿತಿ'ಯ ಅಡಿಯಲ್ಲಿ ಒಂದು ಕಾರ್ಖಾನೆಗೆ, ಮರುಮೌಲ್ಯನಿರ್ಧರಣೆಯ ಆಧಾರದ ಮೇಲೆ ನೀಡಲಾದ ತಾರಾ ಶ್ರೇಣಿಯು, ತಾತ್ಕಾಲಿಕ ಶ್ರೇಣಿ ಸ್ಥಿತಿ ಪತ್ರವನ್ನು ನೀಡಿದ ದಿನಾಂಕದಿಂದ, ಮೂರು ವರ್ಷದ ಅವಧಿಯ ಉಳಿದ ಕಾಲಾವಧಿಯವರೆಗೆ ಸಿಂಧುವಾಗಿರುತ್ತದೆ.

12.3.1 ತಾರಾ ಶ್ರೇಣಿಗೆ ಇನ್ನಿತರ ರೂಪದಲ್ಲಿಅರ್ಹವಾಗಿದ್ದರೂ, ಕನಿಷ್ಠ ಅರ್ಹತಾ ಮಾಪನದ ಅಡಿಯಲ್ಲಿನ ಯಾವುದೇ ಒಂದು ಮಾನದಂಡಗಳ ಅಗತ್ಯತೆಯನ್ನು ಈಡೇರಿಸಿಲ್ಲದಿರುವಂಥ ಕಾರ್ಖಾನೆಗಳಿಗೆನೀಡಲಾಗಿರುವ ಪರಿಮಿತಾವಧಿಯ ಏಕತಾರಾ ಶ್ರೇಣಿಯು, ಕಾಲ ಕಾಲಕ್ಕೆ ನಿರ್ಧರಿಸಬಹುದಾದಷ್ಟು ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

12.3.2 ಒಂದು ನಿರ್ದಿಷ್ಟ ಮಾನದಂಡದಲ್ಲಿನ ಅಗತ್ಯತೆಯನ್ನು ಈಡೇರಿಸಿರುವುದರ ಮೇಲೆ,ಒಂದು ಕಾರ್ಖಾನೆಗೆ ನೀಡಲಾದ, ಅನ್ವಯಿಸುವ ತಾರಾ ಶ್ರೇಣಿಯು, ಪ್ರಾರಂಭಿಕ ತಾರಾ ಶ್ರೇಣಿ ಪ್ರಮಾಣ ಪತ್ರವನ್ನು ನೀಡಿದ ದಿನಾಂಕದಿಂದ, ಮೂರು ವರ್ಷದ ಅವಧಿಯ ಉಳಿದ ಕಾಲಾವಧಿಯವರೆಗೆ ಸಿಂಧುವಾಗಿರತಕ್ಕದ್ದು.

13.0 ನೀಡಿರುವ ಶ್ರೇಣಿಯನ್ನು ಕೆಳಮಟ್ಟಕ್ಕಿಳಿಸುವುದು.

ಮಧ್ಯಕಾಲಿಕ ನಿಗಾವಣಾ ಭೇಟಿ/ ಹೆಚ್ಚುವರಿ ಭೇಟಿಗಳ ಸಂದರ್ಭದಲ್ಲಿ ಒಂದು ಕಾರ್ಖಾನೆಯು, ಪ್ರಾರಂಭಿಕ ಮೌಲ್ಯನಿರ್ಧರಣೆಯ ಸಂದರ್ಭದಲ್ಲಿ ಮೂಲಸೌಕರ್ಯ ಮತ್ತು ನಿರ್ವಹಣಾ ಪದ್ಧತಿಗಳ ವಿಷಯಗಳಲ್ಲಿ ಹೊಂದಿದ್ದ ಗುಣಮಟ್ಟದಲ್ಲಿ ಕುಸಿತ ಉಂಟಾಗಿರುವುದು ಕಂಡುಬಂದ ಪಕ್ಷದಲ್ಲಿ, ಆ ಕಾರ್ಖಾನೆಗೆ ನೀಡಲಾಗಿದ್ದ ಶ್ರೇಣಿಯನ್ನು "ಕೆಳಹಂತ"ಕ್ಕೆ ಇಳಿಸಬಹುದು.ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಒಂದು ಕಾರ್ಖಾನೆಗೆ ನೀಡಲಾಗಿದ್ದ ಶ್ರೇಣಿಯನ್ನು ಕೆಳಮಟ್ಟಕ್ಕೆ ಇಳಿಸುವ ಸಂಬಂಧದಲ್ಲಿನ ತನ್ನ ಶಿಫಾರಸನ್ನು, ಈ ವಿಷಯದಲ್ಲಿ ಹೆಚ್ಚಿನ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶ್ರೇಣಿನೀಡಿಕೆ ಸಮಿತಿಗೆ ಕಳುಹಿಸತಕ್ಕದ್ದು.ತಾಂತ್ರಿಕ ಶ್ರೇಣಿನೀಡಿಕೆ ಸಮಿತಿಯು, ಸಂದರ್ಭಾನುಸಾರವಾಗಿ, ನೀಡಲಾಗಿರುವ ಶ್ರೇಣಿಯನ್ನು ಕೆಳಮಟ್ಟಕ್ಕೆ ಇಳಿಸುವುದು ಮತ್ತು ಕೆಳಮಟ್ಟದ ಶ್ರೇಣಿಯನ್ನು ನೀಡುವುದು ಅಥವಾ ನೀಡಲಾಗಿರುವ ಶ್ರೇಣಿಯನ್ನು ಹಿಂಪಡೆಯುವುದರ ಕುರಿತು ಸೂಕ್ತ ನಿರ್ಧಾರವನ್ನು ಕೈಗೊಳ್ಳುವುದು. ಈ ಸಂಬಂಧವಾಗಿ, ಜವಳಿ ಸಮಿತಿಯ ಕಾರ್ಯದರ್ಶಿ ಅಥವಾ ನಿರ್ದೇಶಕರು

ಸಹಿ ಮಾಡಿರುವ ಪತ್ರವನ್ನು, ಅಂಥ ಕಾರ್ಖಾನೆಗೆ ನೀಡತಕ್ಕದ್ದು ಮತ್ತು ಈ ಮಾಹಿತಿಯನ್ನು ಜವಳಿ ಸಮಿತಿಯ ಜಾಲತಾಣದಲ್ಲಿ ಸಾಮಾನ್ಯವಾಗಿ ಅಂದೇ ಪ್ರಕಟಿಸತಕ್ಕದ್ದು.

14.0 ಶ್ರೇಣಿ ನವೀಕರಣ

14.1 ಪ್ರಮಾಣೀಕರಿಸಲ್ಪಟ್ಟ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು, ಶ್ರೇಣಿಯನ್ನು ನವೀಕರಿಸಿಕೊಳ್ಳುವುದಕ್ಕಾಗಿ, ಸಾಮಾನ್ಯವಾಗಿ ತಾರಾ ಶ್ರೇಣಿ ಪ್ರಮಾಣಪತ್ರದ ವಾಯಿದೆ ಮುಗಿಯುವ ಮೊದಲೇ ಅರ್ಜಿ ಸಲ್ಲಿಸಬಹುದಾಗಿದೆ.ಆದರೆ ಇದು ವಾಯಿದೆ ಮುಕ್ತಾಯವಾದ ಒಂದು ವರ್ಷಕ್ಕಿಂತ ಹೆಚ್ಚು ತಡವಾಗಬಾರದು.ತಾರಾ ಶ್ರೇಣಿ ಪ್ರಮಾಣಪತ್ರದ ವಾಯಿದೆ ಮುಕ್ತಾಯವಾದ ದಿನಾಂಕದಿಂದ,ಒಂದು ವರ್ಷದ ನಂತರ ನವೀಕರಣ ಕೋರುವ ಕಾರ್ಖಾನೆಗಳನ್ನು ಆಯಾ ಪ್ರಕರಣದ ಸ್ವರೂಪದ ಆಧಾರದ ಮೇಲೆ ಪರಿಗಣಿಸಲಾಗುವುದು.

14.2 ಮೂರು ವರ್ಷಗಳ ಮತ್ತೊಂದು ಅವಧಿಗೆ ಶ್ರೇಣಿ ನವೀಕರಣ ಮಾಡುವುದಕ್ಕೆ ಸಂಬಂಧಿಸಿದ ಶುಲ್ಕವು 25,000 ರೂಪಾಯಿಗಳು ಹಾಗೂ ಅನ್ವಯಿಸುವ ತೆರಿಗೆಗಳನ್ನು ಒಳಗೊಂಡಿರುತ್ತದೆ.ಈ ಶ್ರೇಣಿ ನವೀಕರಣ ಶುಲ್ಕದಲ್ಲಿ, ಮೂರು ವರ್ಷಗಳ ಅವಧಿಯೊಳಗೆ ನೀಡಲಾಗುವ ಒಂದು ಮಧ್ಯಕಾಲಿಕ ನಿಗಾವಣಾ ಭೇಟಿಯೂ ಸೇರಿರುತ್ತದೆ.

14.3 ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು (ಮೌಶ್ರೇವಿ), ನವೀಕರಣ ಭೇಟಿ ನೀಡುವುದಕ್ಕಾಗಿ, ತಜ್ಞರ ತಂಡದಿಂದ ಇಬ್ಬರು ಅಧಿಕಾರಿಗಳ ಒಂದು ತಂಡವನ್ನು ನಿಯೋಜಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.

14.4 ಈ ತಂಡವು ಯಂತ್ರೋಪಕರಣ, ಸಿವಿಲ್ ಮೂಲಸೌಕರ್ಯ ಮೊದಲಾದಂಥ ಸೌಲಭ್ಯಗಳು ಸುಸ್ಥಿತಿಯಲ್ಲಿ ಇರುತ್ತವೆಯೇ ಎನ್ನುವುದನ್ನು ಪರಿಶೀಲಿಸತಕ್ಕದ್ದು ಮತ್ತು ನವೀಕರಣ ಭೇಟಿಯ ವರದಿಯನ್ನು ನಿರ್ದಿಷ್ಟಪಡಿಸಿದ ನಮೂನೆ ಅನುಬಂಧ–**VII** (ANNEXURE-VII) ದಲ್ಲಿ ಸಲ್ಲಿಸತಕ್ಕದ್ದು. ಹಾಗೆಯೇ ತಂಡವು, ಕಾರ್ಖಾನೆಯು ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಹೊಸದಾಗಿ ಸೇರ್ಪಡೆ ಮಾಡಲಾಗಿದೆ ಸುಧಾರಣೆ ಮಾಡಲಾಗಿದೆ ಎನ್ನುವುದಾಗಿ ತಿಳಿಸಿದ ಬಾಬುಗಳನ್ನು ಸಹ ಪರಿಶೀಲಿಸತಕ್ಕದ್ದು ಮತ್ತು ಅದನ್ನು ನವೀಕರಣ ಭೇಟಿಯ ವರದಿಯಲ್ಲಿ ದಾಖಲಿಸತಕ್ಕದ್ದು.

14.5 ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ನವೀಕರಣ ಭೇಟಿಯ ವರದಿಯನ್ನು ಪರಿಶೀಲಿಸತಕ್ಕದ್ದು ಮತ್ತು ತನ್ನ ಶಿಫಾರಸನ್ನು ನಿರ್ದೇಶಕರಿಗೆ (ಇಪಿ ಮತ್ತು ಕ್ಯೂಎ) ಸಲ್ಲಿಸತಕ್ಕದ್ದು.

14.6 ನವೀಕರಣ ಭೇಟಿಯ ಶೋಧನಾಂಶಗಳು ಮತ್ತು ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗದ ಶಿಫಾರಸುಗಳ ಆಧಾರದ ಮೇಲೆ ಒಂದು ಕಾರ್ಖಾನೆಗೆ ನೀಡಲಾಗಿರುವ ತಾರಾ ಶ್ರೇಣಿಯ ನವೀಕರಣ ಅಥವಾ ಇನ್ನಿತರ ರೂಪದಲ್ಲಿ ಶ್ರೇಣಿ ನೀಡುವುದನ್ನು ನಿರ್ದೇಶಕರು (ಇಪಿ ಮತ್ತು ಕ್ಯೂಎ) ಅನುಮೋದಿಸತಕ್ಕದ್ದು.

14.7 ಹೀಗೆ, ಶ್ರೇಣಿ ನವೀಕರಣ ಅನುಮೋದನೆ ದೊರೆತ ಮೇಲೆ, ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ತಾರಾ ಶ್ರೇಣಿಯ ನವೀಕರಣದ ಪ್ರಮಾಣಪತ್ರವನ್ನು ನೀಡುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.ಈ ಪ್ರಮಾಣ ಪತ್ರವು, ಮೂರು ವರ್ಷಗಳ ಮತ್ತೊಂದು ಅವಧಿಯವರೆಗೆ ಸಿಂಧುವಾಗಿರತಕ್ಕದ್ದು ಮತ್ತು ಪ್ರಮಾಣೀಕರಣದ ಸಂದರ್ಭದಲ್ಲಿ ಕೈಗೊಳ್ಳಲಾದಂತೆಯೇ ಈಗಲೂ ಸಹ ಮಧ್ಯಕಾಲಿಕ ನಿಗಾವಣಾ ಭೇಟಿಯನ್ನು ಕೈಗೊಳ್ಳತಕ್ಕದ್ದು.

14.8 ಶ್ರೇಣಿಯ ನವೀಕರಣವು ಅನುಮೋದಿತವಾಗದಿದ್ದ ಪಕ್ಷದಲ್ಲಿ, ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು, ಶ್ರೇಣಿ ನವೀಕರಿಸದಿರುವ ವಿಷಯವನ್ನು ಅದಕ್ಕಿರುವ ಕಾರಣಗಳ ಸಹಿತ ಆ ಕಾರ್ಖಾನೆಗೆ ತಿಳಿಸತಕ್ಕದ್ದು.

15.0 ಉನ್ನತ ಶ್ರೇಣಿ ನೀಡುವಿಕೆಗೆ ಸಂಬಂಧಿಸಿದ ಮೌಲ್ಯನಿರ್ಧರಣೆ

15.1 ಮೂಲಭೂತ ಸೌಕರ್ಯಗಳು ಮತ್ತು/ಅಥವಾ ನಿರ್ವಹಣಾ ಪದ್ಧತಿಗಳಲ್ಲಿ ಹೆಚ್ಚಿನ ಸುಧಾರಣೆಗಳನ್ನು ಮಾಡಿರುವುದರಆಧಾರದ ಮೇಲೆ, ಉನ್ನತ ಶ್ರೇಣಿ ಪಡೆಯುವ ಇಚ್ಚೆಯುಳ್ಳ ತಾರಾ ಶ್ರೇಣಿ ಹೊಂದಿರುವ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳು, ಮಧ್ಯಕಾಲಿಕ ನಿಗಾವಣಾ ಭೇಟಿಯ ಅವಧಿಯಲ್ಲಿ ಅಥವಾ ನವೀಕರಣದ ಅವಧಿಯಲ್ಲಿ ಶ್ರೇಣಿಯ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಅರ್ಜಿಸಲ್ಲಿಸುವುದಕ್ಕೆ ಮತ್ತು ಹೊಸದಾಗಿ ಮೌಲ್ಯನಿರ್ಧರಣೆ ಮಾಡುವಂತೆ ಕೋರುವುದಕ್ಕೆ ಮುಕ್ತ ಅವಕಾಶ ಹೊಂದಿರುತ್ತವೆ. ಹಾಗೆಯೇ, ಕಾರ್ಖಾನೆಗಳು, ತಾರಾ ಶ್ರೇಣಿ ಪ್ರಮಾಣ ಪತ್ರದ ವಾಯಿದೆಯ ಯಾವುದೇ ಸಮಯದೊಳಗೆ ಅನ್ವಯವಾಗುವ ಮರುಭೇಟಿ ಶುಲ್ಕವನ್ನು ಪಾವತಿಸುವುದರ ಮೇಲೆ, ಮರುಭೇಟಿ ನೀಡುವಂತೆ ಕೋರುವ

ಮೂಲಕ ಉನ್ನತ ಶ್ರೇಣಿನೀಡಿಕೆಗೆ ಸಂಬಂಧಿಸಿದಂತೆ ಹೊಸದಾಗಿ ಮೌಲ್ಯನಿರ್ಧರಣೆ ಮಾಡುವಂತೆ ಕೋರಬಹುದು.

15.2 ಉನ್ನತ ತಾರಾ ಶ್ರೇಣಿ ನೀಡಿಕೆಗೆ ಸಂಬಂಧಿಸಿದಂತೆ, ಹೊಸದಾಗಿ ಮೌಲ್ಯನಿರ್ಧರಣೆ ಮಾಡುವಂತೆ ಕೋರಿ ಪತ್ರ ಬರೆಯುವ ಒಂದು ಕಾರ್ಖಾನೆಯು,ತಾನು ಮೂಲಭೂತ ಸೌಲಭ್ಯಗಳು ಮತ್ತು/ಅಥವಾ ನಿರ್ವಹಣಾ ಪದ್ಧತಿಗಳ ವಿಷಯದಲ್ಲಿ ಮಾಡಿರುವ ಸುಧಾರಣೆಗಳನ್ನು ಅದರಲ್ಲಿ ಉಲ್ಲೇಖಿಸತಕ್ಕದ್ದು. ಕಾರ್ಖಾನೆಗಳು ಇಂಥ ಕೋರಿಕೆ ಪತ್ರಗಳನ್ನು ಸಾಕಷ್ಟು ಮುಂಚಿತವಾಗಿ ಸಲ್ಲಿಸತಕ್ಕದ್ದು.

15.3 ಕೋರಿಕೆ ಪತ್ರವನ್ನು ಸ್ವೀಕರಿಸಿದ ಮೇಲೆ, ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ವಿಭಾಗವು (ಮೌಶ್ರೇವಿ) ಹೊಸದಾಗಿ ಮೌಲ್ಯನಿರ್ಧರಣೆ ಮಾಡುವ ಸಲುವಾಗಿ, ತಜ್ಞರ ತಂಡದಿಂದ ಅಧಿಕಾರಿ/ಗಳನ್ನು ನಿಯೋಜಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು.

15.4 ಹೀಗೆ ನಿಯೋಜಿತರಾದ ಅಧಿಕಾರಿ/ಗಳು ಆ ಕಾರ್ಖಾನೆಯು ಮಾಡಿರುವುದಾಗಿ ಹೇಳಿರುವ ಸುಧಾರಣೆಗಳನ್ನು ಕುರಿತು ಪರಿಶೀಲಿಸತಕ್ಕದ್ದು. ಅಂಥ ಕಾರ್ಖಾನೆಯು, ಉನ್ನತ ಶ್ರೇಣಿಯನ್ನು ಹೊಂದುವುದಕ್ಕೆ ಮೇಲ್ನೋಟಕ್ಕೆ ಅರ್ಹವಾಗಿರುವುದಾಗಿ ಕಂಡುಬಂದ ಪಕ್ಷದಲ್ಲಿ, ಅಧಿಕಾರಿ/ಗಳು, ಪ್ರಾರಂಭಿಕ ಮೌಲ್ಯನಿರ್ಧರಣೆಯ ಸಂದರ್ಭದಲ್ಲಿ ಅನುಸರಿಸಲಾದ ಕಾರ್ಯವಿಧಾನವನ್ನೇ ಅನುಸರಿಸುವ ಮೂಲಕ ಹೊಸ ಮೌಲ್ಯನಿರ್ಧರಣೆಯನ್ನು ಮಾಡತಕ್ಕದ್ದು ಮತ್ತು ಭೇಟಿ ತಂಡದ ವರದಿ'ಯ ನಮೂನೆ **'ಅನುಬಂಧ–III"** (ANNEXURE-III) ದಲ್ಲಿ ತನ್ನ ವರದಿಯನ್ನು ಭಾವಚಿತ್ರಗಳ ಸಹಿತ ಸಲ್ಲಿಸತಕ್ಕದ್ದು. ಪ್ರಾರಂಭಿಕ ಮೌಲ್ಯನಿರ್ಧರಣೆಯಲ್ಲಿಯ ಸಂದರ್ಭದಲ್ಲಿ ಅನುಸರಿಸಲಾದ ಕಾರ್ಯವಿಧಾನವನ್ನೇ ಅನುಸರಿಸುವ ಮೂಲಕ, ಮೌಲ್ಯನಿರ್ಧರಣೆ ಮತ್ತು ಶ್ರೇಣಿನೀಡಿಕೆ ಮಾಪನದ ಅನುಸಾರ, ಅನ್ವಯವಾಗುವ ಶ್ರೇಣಿಯನ್ನು ಕಾರ್ಖಾನೆಗೆ ನೀಡತಕ್ಕದ್ದು.

15.5 ಹೀಗೆ, ಹೊಸದಾಗಿ ಮೌಲ್ಯನಿರ್ಧರಣೆ ಮಾಡಿದುದರ ಆಧಾರದ ಮೇಲೆ ನೀಡಲಾದ ಶ್ರೇಣಿಯು, ಈ ಹಿಂದೆ ನೀಡಲಾಗಿರುವ ಶ್ರೇಣಿ ಪ್ರಮಾಣಪತ್ರದ ಸಿಂಧುತ್ವದ ಅವಧಿಯಲ್ಲಿನ ಉಳಿದ ಕಾಲಾವಧಿಯವರೆಗೆ ಸಿಂಧುವಾಗಿರುತ್ತದೆ.

16.0 ಕೋರಿಕೆ ಮತ್ತು ಮರುಭೇಟಿ ಶುಲ್ಕ ಪಾವತಿಸುವುದರ ಮೇಲೆ ಮರುಭೇಟಿ ನೀಡುವುದಕ್ಕೆ ಇರುವ ಅವಕಾಶ.

16.1 ಕಡ್ಡಾಯವಾಗಿ ನಿಗದಿಪಡಿಸಲಾಗಿರುವ ಮೌಲ್ಯನಿರ್ಧರಣೆಯ ಭೇಟಿ ಮತ್ತು ಮಧ್ಯಕಾಲಿಕ ನಿಗಾವಣಾ ಭೇಟಿಗಳನ್ನು ಹೊರತುಪಡಿಸಿ ಒಂದು ಕಾರ್ಖಾನೆಯು, ತಾರಾ ಶ್ರೇಣಿಯನ್ನು ಉನ್ನತೀಕರಿಸಿಕೊಳ್ಳುವುದಕ್ಕೆ ಅಥವಾ ತಾತ್ಕಾಲಿಕ ಶ್ರೇಣಿ ಸ್ಥಿತಿಯಿಂದ ತಾರಾ ಶ್ರೇಣಿಯನ್ನು ಹೊಂದುವುದಕ್ಕೆ ಇಲ್ಲವೇ, ಪರಿಮಿತಾವಧಿಯ ಏಕತಾರಾ ಶ್ರೇಣಿಯಿಂದ ನಿಯತವಾದ ತಾರಾ ಶ್ರೇಣಿಯನ್ನು ಹೊಂದುವುದಕ್ಕೆ ಸಂಬಂಧಿಸಿದಂತೆ ಮರುಭೇಟಿ ನೀಡುವಂತೆ ಕೋರಬಹುದು.

16.2 ಮರುಭೇಟಿಯ ಶುಲ್ಕ ರೂ.15,000/– ಆಗಿರುತ್ತದೆ.

16.3 ಆದಾಗ್ಯೂ, ಶ್ರೇಣಿ ಪ್ರಮಾಣಪತ್ರ ತಾತ್ಕಾಲಿಕ ಶ್ರೇಣಿ ಸ್ಥಿತಿ ಪತ್ರ ನೀಡಿದ ದಿನಾಂಕದಿಂದ ಒಂದು ವರ್ಷದೊಳಗೆ ಮರುಭೇಟಿಯನ್ನು ಕೋರುವಂಥ ಕಾರ್ಖಾನೆಗಳಿಗೆ,ಮರುಭೇಟಿ ಶುಲ್ಕ ಪಾವತಿಯಿಂದ ಒಂದುಬಾರಿ ವಿನಾಯಿತಿ ನೀಡಲಾಗುವುದು.

16.4 ಪರಸ್ಪರ ಒಪ್ಪಿಗೆಯ ಮೇಲೆ ನಿಗದಿಯಾಗಿದ್ದ ದಿನದಂದು ಮೌಲ್ಯನಿರ್ಧರಣೆಗೆ ಭೇಟಿ ನೀಡಿದಾಗ ಮುಚ್ಚಿರುವಂಥ ಕಾರ್ಖಾನೆಗಳು, ಮೌಲ್ಯನಿರ್ಧರಣೆಗಾಗಿ ಮರುಭೇಟಿ ನೀಡುವಂತೆ ಸಹ ಕೋರಬಹುದು.ಈ ಹಿಂದೆ ಭೇಟಿ ನೀಡಿದ್ದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಹೀಗೆ ಮರುಭೇಟಿ ನೀಡುವಂತೆ ಕೋರಲಾಗುವ ಕಾರ್ಖಾನೆಗಳಿಗೆ,ಮರುಭೇಟಿ ಶುಲ್ಕ ಪಾವತಿಯಿಂದ ಒಂದು ಬಾರಿ ವಿನಾಯಿತಿ ನೀಡಲಾಗುವುದು.

*****